# ಕರ್ನಾಟಕ ಸರಕಾರದ ನಡುವಳಿಕೆಗಳು

ವಿಷಯ:- ಬಾಗಲಕೋಟ ಜಿಲ್ಲಾ ಜಮಖಂಡಿ ತಾಲೂಕಿನ ಬುದ್ನಿ ಗ್ರಾಮದ ಜಮೀನುಗಳು ಆಲಮಟ್ಟಿ ಜಲಾಶಯದಲ್ಲಿ ಎಫ್‌ಆರ್‌ಎಲ್ 519.6 ಮೀ. ದಿಂದ 524.256ಮೀ.ವರೆಗೆ ಹಿನ್ನೀರಿನಿಂದ ಮುಳುಗಡೆಯಾಗುವ ಅಧಿಕ/ಹೆಚ್ಚುವರಿ ಜಮೀನುಗಳನ್ನು ನೀರಾವರಿ ಯೋಜನೆಗಾಗಿ ಭೂಸ್ವಾಧೀನಗೊಳ್ಳುವ ಜಮೀನುಗಳ ಮಾಲೀಕರಿಗೆ ಭೂಸ್ವಾಧೀನ ಕಾಯ್ದೆ-2013ರ ಕಲಂ-16(6) ಕಲಂ-16(6) ರನ್ವಯ ಪುನರ್‌ವಸತಿ & ಪುನರ್‌ವ್ಯವಸ್ಥೆ ಕರಡು ಯಾದಿಯನ್ನು ಅನುಮೋದಿಸುವ ಕುರಿತು.

ಓದಲಾಗಿದೆ:1) ಭೂಸ್ವಾಧೀನ ಕಾಯ್ದೆ 2013ರಕಲಂ 11(1) ರ ಕ್ರಮಾಂಕ: ಎಲ್‌ಎಕ್ಯೂ:ಎಸ್‌ಆರ್:3:2017-16ಕ್ಕೆ ಅನುಸಾರವಾಗಿ ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ:ಎಲ್‌ಎಕ್ಯೂ/ಸಿಆರ್-01/13-14, ದಿ:25-10-2017, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕ: 28-10-2017.

2) ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಕುರಿತು.

3) ಈ ಕಾರ್ಯಾಲಯದ ಅವಧಿ ವಿಸ್ತರಣೆ ಪತ್ರ ಸಂ.ಕಂಇ/ಭೂಸ್ವಾ-9ಎ/ಸಿಆರ್-02/18-19/879, ದಿನಾಂಕ:19-11-2018.

4) ಪುನರ್‌ವಸತಿ ಅಧಿಕಾರಿಗಳು, ಕೃ.ಮೇ.ಯೋ. ಜಮಖಂಡಿ ಇವರ ಪತ್ರ ಸಂ:ಪುಅಜ /ಬುದ್ನಿ/ವಿನಿವ- /19-20/168, ದಿ:29-08-2019 (ಈ ಕಛೇರಿಗೆ ಸ್ವೀಕೃತವಾದ ದಿ:30.08.2019).

5) ಮಹಾ ವ್ಯವಸ್ಥಾಪಕರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃ.ಮೇ.ಯೋ. ನವನಗರ, ಬಾಗಲಕೋಟ ಇವರ ಕಲಂ 17(2)ರಡಿ ಶಿಫಾರಸ್ಸು ದಿನಾಂಕ: -09-2019.

**ಸಂ:ಕಂಇ/ಭೂಸ್ವಾ-9ಎ/ಸಿಆರ್-02/2018-19** /824 **ದಿನಾಂಕ: 17-09-2019.**

ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ಜಮಖಂಡಿ ಇವರಿಂದ ಬಂದಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ಜಮಖಂಡಿ ತಾಲೂಕಿನ ಬುದ್ನಿ ಗ್ರಾಮದ ಜಮೀನುಗಳು ಆಲಮಟ್ಟಿ ಜಲಾಶಯದಲ್ಲಿ ಎಫ್‌ಆರ್‌ಎಲ್ 519.6 ಮೀ. ದಿಂದ 524.256ಮೀ.ವರೆಗೆ ಹಿನ್ನೀರಿನಿಂದ ಮುಳುಗಡೆಯಾಗುವ ಅಧಿಕ/ಹೆಚ್ಚುವರಿ ಜಮೀನುಗಳನ್ನು ನೀರಾವರಿ ಯೋಜನೆಗಾಗಿ ಭೂಸ್ವಾಧೀನಗೊಳ್ಳುವ ಜಮೀನುಗಳನ್ನು ಸ್ವಾಧೀನ ಪಡಿಸುತ್ತಿದ್ದು ಜಮೀನು ಕಳೆದುಕೊಳ್ಳುವ ಮಾಲೀಕರಿಗೆ ಜೆಎಂಸಿ ಪ್ರಕಾರ 36ಎ-01ಗುಂ. ಕ್ಷೇತ್ರಕ್ಕೆ ನೂತನ ಕಾಯ್ದೆ 2013 ಕಲಂ 16(2) ನೇದ್ದರ ಮೇರೆಗೆ ಗಣತಿ ಕಾರ್ಯವನ್ನು ಕೈಗೊಂಡು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಯಾದಿಯನ್ನು ತಯಾರಿಸಿದ್ದಾರೆ.

ವಿಶೇಷ ಭೂಸ್ವಾಧೀನಾಧಿಕಾರಿ, ಕೃ.ಮೇ.ಯೋ. ಜಮಖಂಡಿ ಇವರನ್ನು ಈ ಯೋಜನೆಗೆ ಕಾರ್‍ಯವನ್ನು ನಿರ್ವಹಿಸಲು ನೇಮಿಸಲಾಗಿದೆ ಮತ್ತು ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಆದೇಶಿಸುವ ಅಧಿಕಾರವನ್ನು ನೀಡಲಾಗಿದೆ.

ಪ್ರಕರಣ ಅಸ್ತಿತ್ವದಲ್ಲಿರುವ ಸಂದರ್ಭಗಳು ನ್ಯಾಯಯುತ ಅಭಿಪ್ರಾಯ ಹೊಂದಿರುವುದರಿಂದ ಉಲ್ಲೇಖ (3)ರಡಿ ಕಾಯ್ದೆ ಕಲಂ 19(7)ರಡಿ ಅಂತಿಮ ಅಧಿಸೂಚನೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಅನುಗುಣವಾಗಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು ಹಾಗೂ ಭೂಸ್ವಾಧೀನ ಕಾಯ್ದೆ 2013ರ ಕಲಂ 45 ರಡಿ ಪ್ರಕರಣದಲ್ಲಿ ಸದರಿ ಭೂಸ್ವಾಧೀನ ಪ್ರಕರಣದಲ್ಲಿ ಒಳಗೊಂಡ ಕ್ಷೇತ್ರವು 100 ಎಕರೆಗಿಂತ ಕಡಿಮೆ ಇರುವುದರಿಂದ ಯೋಜನಾ ವ್ಯಾಪ್ತಿಯ ಸಮಿತಿಯನ್ನು ಅಸ್ತಿತ್ವಕ್ಕೆ ಇರುವುದಿಲ್ಲ. ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಕಲ್ಪಿಸುವ ಕರಡು ಯಾದಿಗೆ ಸಂಬಂಧಿಸಿದಂತೆ ಯಾವುದೇ ಲಿಖಿತ ಅಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ.

...2